

'ಮರಿಯಾ, ಪ್ರಾಣವನ್ನು ಉಳಿಸುವುದೇ ವೈದ್ಯನ ಮುಖ್ಯ ಕರ್ತವ್ಯ, ಜೀವ ತೆಗೆಯುವುದಲ್ಲ. ಇಷ್ಟೊಂದು ಬೆಳೆದ ಮಗುವನ್ನು ಸಾಯಿಸಲು ನನ್ನ ಮನಸು, ವೃತ್ತಿ ಮತ್ತು ಕಾನೂನು ಅವಕಾಶ ಕೊಡುವುದಿಲ್ಲ. ನಿನ್ನ ಮಾನಸಿಕ ತುಮುಲದ ಅರಿವು ನಮಗೆ ಸಂಪೂರ್ಣವಾಗಿ ಅರ್ಥವಾಗುತ್ತಿದೆ. ಆ ತುಮುಲದಿಂದ ನಿನ್ನನ್ನು ಹೊರತರಲು ನಾವು ಸಹಾಯ ಮಾಡಬಹುದೇ ಹೊರತು ಈ ಮಗುವಿನ ಜೀವ ತೆಗೆಯಲು ಸಾಧ್ಯವಿಲ್ಲ' ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

'ಜೀವ ಭಯದಿಂದ ದೇಶದ ಗಡಿಯನ್ನು ದಾಟಿ, ಕಂಡರಿಯದ ಸ್ಥಳಗಳಲ್ಲಿ ವಾಸಮಾಡಿ, ಸ್ಕಾಟ್ಲೆಂಡಿನ ವಿಹಾರ ನೌಕೆಯಲ್ಲಿ ನೆಲೆಕಂಡುಕೊಳ್ಳುವ ಸಾಹಸದಲ್ಲಿ, ಈ ಪಾಪದ ಪಿಂಡ ಗರ್ಭದಲ್ಲಿ ಬೆಳೆಯುತ್ತಿರುವುದು ನನಗೆ ಗೊತ್ತಾಗದಿದ್ದುದು ನನ್ನ ತಪ್ಪೇ? ಹಾಗಾದರೆ ನನಗೆ ಬೇರೆ ಯಾವ ಅವಕಾಶಗಳು ಇಲ್ಲವೇ?' ಎಂದು ನಿರಾಶಾಭಾವದಿಂದ ಮರಿಯಾ ಮಾತನ್ನು ಮುಂದುವರೆಸಿದ್ದಳು.

'ಕೆಲವು ಸಲ ಪರಿಸ್ಥಿತಿಯು ನಮ್ಮ ಕೈಯಲ್ಲಿರದೆ, ನಾವೆಲ್ಲ ವಿಧಿಯ ಕೈವಾಡಕ್ಕೆ ಶರಣಾಗಬೇಕಾಗುತ್ತದೆ. ಇದರಲ್ಲಿ ನಿನ್ನ ತಪ್ಪಿದೆ ಎಂದು ಯಾರೂ ಹೇಳುವಂತಿಲ್ಲ. ಹಾಗೆಯೇ ನಿನಗೆ ಯಾವ ಅವಕಾಶವೂ ಇಲ್ಲವೆಂದಲ್ಲ. ನಿನ್ನಂತ ಪರಿಸ್ಥಿತಿಯಲ್ಲಿರುವ ಹೆಂಗಳೆಯರಿಗೆಂದೇ ಮಾಡಲ್ಪಟ್ಟಿರುವ ಈ ದೇಶದ ವಿಶೇಷ ವ್ಯವಸ್ಥೆಯನ್ನು ಉಪಯೋಗಿಸುವ ಸಂಪೂರ್ಣ ಅವಕಾಶ ನಿನಗಿದೆ. ಆರ್ಥಿಕವಾಗಿ, ಮಾನಸಿಕವಾಗಿ ಮತ್ತು ಸಾಮಾಜಿಕವಾಗಿ ಎಲ್ಲರೂ ನಿನ್ನ ಜೊತೆಗಿದ್ದೇವೆ. ಕೆಲವು ಸಲ ಜೀವನದಲ್ಲಿ ಬಹಳಷ್ಟು ಅವಕಾಶಗಳು ಇರುವುದಿಲ್ಲ, ಇದ್ದ ಅವಕಾಶದಲ್ಲಿ ಮಾತ್ರ ಜೀವನವನ್ನು ತೇಯಬೇಕಾಗುತ್ತದೆ. ಕಷ್ಟಗಳ ಮಳೆಯು ರಭಸದಿಂದ ಸುರಿಯತೊಡಗಿದಾಗ, ಕರಗದ ಕಲ್ಲು ಬಂಡೆಯಂತಾಗಬೇಕಾಗುತ್ತದೆ. ಕೆಲವೊಮ್ಮೆ ಅದುವೇ ಜೀವನವೆನಿಸುತ್ತದೆ' ಎಂದು ಸಿಸ್ಟರ್ ಲೂಸಿ ಅವಳಿಗೆ ಭರವಸೆಯನ್ನು ತುಂಬುವ ಪ್ರಯತ್ನವನ್ನು ಮಾಡುತ್ತಿದ್ದಳು. ಅದೇನೋ ಯೋಚಿಸುತ್ತಿದ್ದ ಮರಿಯಾ ಹೇಳಿದಳು:

'ಹೌದು ಸಿಸ್ಟರ್, ನನಗೆ ನನ್ನದೇ ಎನ್ನುವ ಯಾವ ಅವಕಾಶಗಳೂ ಇಲ್ಲ. ದೇಶವನ್ನು ತೊರೆದು ಓಡಿಬರುವುದನ್ನು ಬಿಟ್ಟರೆ ಬೇರೆ ಅವಕಾಶವಿರಲಿಲ್ಲ, ಈಗ ಈ ಪಾಪದ ಪಿಂಡವನ್ನು ಹೊಟ್ಟೆಯಲ್ಲಿ ಹೊರುವುದನ್ನು ಬಿಟ್ಟರೆ ಇನ್ನೇನು ಅವಕಾಶವಿದೆ?' ಡಾಕ್ಟರ್ ಜಾಧವ್ ಮರಿಯಾಳತ್ತ ಒಮ್ಮೆ ಕಣ್ಣಾಡಿಸಿ ಮಾತು ಮುಂದುವರೆಸಿದರು.

'ನಿನ್ನ ವೇದನೆ ನಮಗೆ ಅರಿವಾಗುತ್ತದೆ. ನಿನ್ನ ದೇಶದಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಯಾರು ಗೆಲ್ಲುವರು? ಯಾರು ಸೋಲುವರು? ಎಂಬ ಅರಿವು ನನಗಂತೂ ಇಲ್ಲ. ಆದರೆ ನಿನ್ನ ಜೀವನದಲ್ಲಿ ನಡೆಯುತ್ತಿರುವ ಈ ಯುದ್ಧವನ್ನು ನೀನು ಮನಸ್ಥೈರ್ಯದಿಂದ ಗೆದ್ದೇ ಗೆಲ್ಲುತ್ತಿ ಎಂಬ ನಂಬಿಕೆ ನನಗಿದೆ. ದಯವಿಟ್ಟು ನಮ್ಮ ಮಾತನ್ನು ನಂಬು. ಹಾಗೆಯೇ ನಿನಗೆ ಮುಂದಿನ ವ್ಯವಸ್ಥೆಯನ್ನು ಮಾಡಿಸಲು ನಮಗೆ ಅವಕಾಶ ಕೊಡು' ಎಂದು ಹೇಳಿ ಸಿಸ್ಟರ್ ಲೂಸಿಯತ್ತ ನೋಡಿದರು.

ಬೇರೆ ಹಾದಿಯೇ ಇಲ್ಲವೆಂದು ತಿಳಿದಾಗ, ನಿರಾಶ್ರಿತಳಾದ ಮರಿಯಾ ಮೌನದಿಂದಲೇ ಅವರ ಮುಂದಿನ ಕಾರ್ಯಾಚರಣೆಗೆ ಒಪ್ಪಿಗೆಯನ್ನು ಸೂಚಿಸಿದ್ದಳು. ಡಾಕ್ಟರ್ ಮತ್ತು ಸಿಸ್ಟರ್ ಲೂಸಿಯ ನೇತೃತ್ವದಲ್ಲಿ, ದುರ್ಬಲರಿಗೆ, ಗರ್ಭಾವಸ್ಥೆಯ ಸಮಯದಲ್ಲಿ, ವಿಶೇಷ ಸೌಲಭ್ಯಗಳನ್ನು ಒದಗಿಸುವ ಸಂಘಟನೆಯ ಜೊತೆಗೆ ಒಂದು ಸಭೆ ನಡೆದು, ಮರಿಯಾಳಿಗೆ ಆರ್ಥಿಕ, ಮಾನಸಿಕ ಮತ್ತು ಸಾಮಾಜಿಕ ಸಹಾಯವನ್ನು ಒದಗಿಸುವ ನಿರ್ಧಾರಕ್ಕೆ ಸಮ್ಮತಿ ದೊರಕಿತ್ತು. ಈ ಪರಿಸ್ಥಿತಿಯಲ್ಲಿ ಹುಟ್ಟಿದ ಮಗುವನ್ನು ಪೋಷಿಸುವ ಸಾಮರ್ಥ್ಯ ಅವಳಿಗಿಲ್ಲವೆಂದು ಅರಿವಾಗಿ, ಮಗುವನ್ನು 'ಫೋಸ್ಟರ್ ಕೇರ್'ಗೆ (ವಿಶೇಷ ಅನಾಥಾಲಯ) ಒಪ್ಪಿಸುವ ನಿರ್ಧಾರವೂ ಆಗಿತ್ತು. ಸಿಸ್ಟರ್ ಮತ್ತು ಡಾಕ್ಟರ್, ಸಭೆಯಲ್ಲಾದ ನಿರ್ಧಾರವನ್ನು ಕೂಲಂಕಷವಾಗಿ ಮರಿಯಾಗೆ ವಿವರಿಸಿದ್ದರು. ಬೇರೆ ವಿಧಿಯಿಲ್ಲದೆ ಆದ ನಿರ್ಧಾರವನ್ನು ಒಪ್ಪಿಕೊಂಡಿದ್ದಳು ಮರಿಯಾ. ಕನಿಷ್ಠ ಈ ಪಾಪದ ಮಗುವನ್ನು ಬೆಳೆಸುವ ಜವಾಬ್ದಾರಿ ಇಲ್ಲವಲ್ಲ ಎಂದು ನಿಟ್ಟುಸಿರುಬಿಟ್ಟಿದ್ದಳು. ಎರಡು ದಿನಗಳಲ್ಲಿ ಚೇತರಿಸಿಕೊಂಡು, ಆಸ್ಪತ್ರೆಯನ್ನು ಬಿಡುವ ತಯಾರಿ ನಡೆಸಿದ್ದಳು ಮರಿಯಾ. 'ಕ್ಲೈಡ್' ನದಿಯ ದಂಡೆಯಲ್ಲಿ ಕಟ್ಟಿ ಹಾಕಿ, ಸ್ಕಾಟ್ಲೆಂಡಿನ ಸರ್ಕಾರದ ಸಹಾಯದಿಂದ, ಸಾವಿರಾರು ಯುದ್ಧ ನಿರಾಶ್ರಿತರಿಗೆ ತಾತ್ಕಾಲಿಕ ನೆಲೆಯನ್ನು ಒದಗಿಸಿದ್ದ ವಿಹಾರ ನೌಕೆಯೇ ಮರಿಯಾಳ ಮನೆಯಾಗಿತ್ತು. ಅವಳನ್ನು ತನ್ನ ಕಾರಿನಲ್ಲಿ ಅಲ್ಲಿಗೆ ತಲುಪಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಳು ಸಿಸ್ಟರ್ ಲೂಸಿ. ಕಾರಿನಲ್ಲಿ ಮೌನವಾಗಿ ಕುಳಿತಿದ್ದ ಮರಿಯಾಳನ್ನು ಮಾತಿನಲ್ಲಿ ತೊಡಗಿಸುವ ಯತ್ನದಲ್ಲಿ,

'ಜಗತ್ತು ಇಷ್ಟೊಂದು ಮುಂದುವರೆದರೂ, ಆಗಾಗ ಸಂಸ್ಕೃತಿಯನ್ನು ಕಳೆದುಕೊಂಡು ಮತ್ತೆ ಶಿಲಾಯುಗಕ್ಕೆ ಹೋಗುತ್ತಿರುವುದು ಎಷ್ಟೊಂದು ದುರದೃಷ್ಟಕರ' ಎಂದು ಮರಿಯಾಳತ್ತ ನೋಡಿದಳು. ಏನು ಹೇಳಬೇಕೆಂದು ತೋಚದಿದ್ದರೂ ಕೊನೆಗೂ ಮೌನ ಮುರಿದಳು ಮರಿಯಾ.

'ಗಂಡಿನಷ್ಟೇ ಹೆಣ್ಣು ಸಬಲವಾಗುವವರೆಗೂ ಈ ದೌರ್ಜನ್ಯ ಮುಂದುವರೆಯುವುದರಲ್ಲಿ ಯಾವ ಸಂದೇಹವೂ ಇಲ್ಲ. ನಾನು ಹೇಡಿಯಾಗಿ ಪ್ರಾಣಭಯದಿಂದ ದೇಶವನ್ನು ಬಿಟ್ಟು ಓಡಿಬರುವುದರ ಬದಲು, ಕೈಯಲ್ಲಿ ಕೋವಿಯನ್ನು ಎತ್ತಿ ಆ ದುಷ್ಟ ಸೈನಿಕನನ್ನು ಕೊಂದುಹಾಕಿದ್ದರೆ ಎಷ್ಟೋ ಚೆನ್ನಾಗಿರುತಿತ್ತು. ನಾರಿಶಕ್ತಿ ಬಲಿಷ್ಠವಾಗಬೇಕು. ನನ್ನಂಥವರು ಅನ್ಯಾಯದ ಎದುರು ಸೆಟೆದು ನಿಲ್ಲಬೇಕು'. ಅವಳ ಮಾತಿನಲ್ಲಿ ಎಷ್ಟೊಂದು ರೋಷವಿತ್ತು ಎನ್ನುವುದು ಲೂಸಿಗೆ ಅರಿವಾಗದೆ ಇರಲಿಲ್ಲ.

'ಖಂಡಿತ ನಿನ್ನ ಮಾತಿನಲ್ಲಿ ಸತ್ಯವಿದೆ. ನೀನು ಮಾನಸಿಕ ಮತ್ತು ದೈಹಿಕವಾಗಿ ಸೆಟೆದು ನಿಲ್ಲುತ್ತಿ ಎಂಬುದು ನಮ್ಮೆಲ್ಲರ ಆಶಯ. ಏನಾದರೂ ಸಹಾಯ ಬೇಕಿದ್ದರೆ ನಮ್ಮನ್ನು ಸಂಪರ್ಕಿಸಲು ಮರೆಯಬೇಡ. ಕೆಲವೇ ವಾರಗಳಲ್ಲಿ ನಿನ್ನನ್ನು ಮತ್ತೆ ಕಾಣುತ್ತೇವೆ' ಎಂದು ಹೇಳಿ ಅವಳನ್ನು ಬೀಳ್ಕೊಟ್ಟಳು ಲೂಸಿ. ಸ್ವಚ್ಛಂದವಾಗಿ ಸಮುದ್ರದಲ್ಲಿ ತೇಲಾಡುತ್ತಾ, ಸಾವಿರಾರು ಪ್ರಯಾಣಿಕರಿಗೆ ಯೂರೋಪಿನ ರಮಣೀಯ ಸ್ಥಳಗಳ ಸವಿಯನ್ನು ಒದಗಿಸುತ್ತಿದ್ದ ನೌಕೆ, ಈಗ ತಟಸ್ಥವಾಗಿ ನದಿಯ ದಂಡೆಯಲ್ಲಿ ನಿಂತು, ಸುಮಾರು ಒಂದೂವರೆ ಸಾವಿರ ನಿರಾಶ್ರಿತರಿಗೆ ಆಶ್ರಯವನ್ನು ಕೊಟ್ಟಿತ್ತು. ನೌಕೆಗೆ ತಕ್ಕದಾದ ಹೆಸರು 'ಎಂ.ಎಸ್. ಆಂಬಿಷನ್' ಅಂದರೆ 'ಮಹತ್ವಾಕಾಂಕ್ಷೆ'. ಹೆಸರು ಸೂಚಿಸುವಂತೆ ಅವರೆಲ್ಲರ ಬದುಕಿನಲ್ಲೊಂದು ಆಕಾಂಕ್ಷೆಯನ್ನು ಹುಟ್ಟಿಸಿತ್ತು ಆ ನೌಕೆ. ಇದ್ದವರಲ್ಲಿ ಹೆಚ್ಚಿನವರು ವಯಸ್ಸಾದವರು, ಹೆಂಗಸರು ಮತ್ತು ಮಕ್ಕಳು. ಮರಿಯಾಗೆ ಅವರೇ ದಿನನಿತ್ಯದ ಒಡನಾಡಿಗಳು. ಅವರ ಹೆಜ್ಜೆಯ ಗುರುತಿನಲ್ಲಿ ತನ್ನ ಪಾದವನ್ನಿಟ್ಟು ತನ್ನ ದುಃಖವನ್ನು ಮರೆಯಲು ಪ್ರಯತ್ನಿಸತೊಡಗಿದಳು. ದಿನಗಳು ಅವಳಿಗೆ ಅರಿವಿಲ್ಲದಂತೆ ಓಡತೊಡಗಿದರೆ, ಹೊಟ್ಟೆಯಲ್ಲಿದ್ದ ಮಗುವಿನ ಓಡಾಟದ ಅರಿವು ಮಾತ್ರ ದಿನದಿನಕ್ಕೆ ಅಷ್ಟೇ ಜಾಸ್ತಿಯಾಗತೊಡಗಿತ್ತು. ಕೆಲವು ಸಲ ತನ್ನ ಕರುಳೇ ಕಿತ್ತು ಓಡಾಡುತ್ತಿರುವಂತೆ ಭಾಸವಾಗುತ್ತಿತ್ತು. ಸಹಾಯಕ ಸಂಘಟನೆಯಿಂದ ತಪ್ಪದೇ ಬರುತ್ತಿದ್ದ ಸ್ಫೂರ್ತಿದಾಯಕ ಕರೆಗಳು, ಭೇಟಿಗಳು, ನಿರಾಶೆಯಿಂದ ಕಪ್ಪಿಟ್ಟಿದ್ದ ಅವಳ ಮನಸಿನಲ್ಲಿ ಆಶಾವಾದದ ಹೊಂಗಿರಣವನ್ನು ಸೂಸತೊಡಗಿದ್ದವು. ಕೌನ್ಸಿಲ್ಲವತಿಯಿಂದ, ನೌಕೆಯಲ್ಲಿದ್ದ ನಿರಾಶ್ರಿತ ಮಕ್ಕಳಿಗೆ ಇಂಗ್ಲಿಷ್ ಭಾಷೆಯನ್ನು ಬೋಧಿಸುವ ಸಣ್ಣ ಕೆಲಸವೂ ದೊರಕಿತ್ತು. ಮಕ್ಕಳೊಡಗಿನ ಒಡನಾಟ ಮನಸಿಗೆ ಮುದಕೊಡತೊಡಗಿತ್ತು.

ಅದೊಂದು ದಿನ ಡಾಕ್ಟರ್ ಜಾಧವ್ ಅವಳಿದ್ದ ಸ್ಥಳಕ್ಕೆ ಅನಿರೀಕ್ಷಿತ ಭೇಟಿ ಕೊಟ್ಟಿದ್ದರು. ಮಕ್ಕಳೊಂದಿಗೆ ಪಾಠದಲ್ಲಿ ತೊಡಗಿದ್ದ ಮರಿಯಾ ಆಶ್ಚರ್ಯದಿಂದ, 'ಹಲೋ ಡಾಕ್ಟರ್, ಇದೇನು ವಿಶೇಷ? ಮುಂದಿನ ವಾರ ನಿಮ್ಮನ್ನು ಕಾಣಲು ಆಸ್ಪತ್ರೆಗೆ ನಾನೇ ಬರುವವಳಿದ್ದೆ' ಎಂದಳು.

'ಏನೂ ವಿಶೇಷವಿಲ್ಲ, ಸಹಾಯಕ ಸಂಘಟನೆಯವರು ಆರೋಗ್ಯ ತಪಾಸಣೆ ಶಿಬಿರವನ್ನು ಏರ್ಪಡಿಸಿದ್ದರು. ನನಗೂ ಕಳೆದ ಕೆಲವು ದಿನಗಳಿಂದ ಈ ನೌಕೆಯನ್ನು ಭೇಟಿಯಾಗಬೇಕೆಂಬ ಬಯಕೆಯಿತ್ತು. ಇವೊತ್ತು ಹೇಗೋ ಅವಕಾಶ ಸಿಕ್ಕಿತು' ಎಂದು ಉತ್ತರಕೊಟ್ಟು, ಮರಿಯಾಳತ್ತ ಒಮ್ಮೆ ಕಣ್ಣು ಹರಿಸಿದರು. ಅವಳ ಮುಖದ ಮೇಲೆ ಬಹಳ ಬದಲಾವಣೆಯಾಗಿದೆ ಎನಿಸಿತು. ಬಲಹೀನವಾಗಿದ್ದ ಅವಳ ಕಣ್ಣುಗಳಲ್ಲಿ ಚೇತರಿಕೆಯ ಛಾಯೆ, ಮಾತಿನಲ್ಲಿ ಆತ್ಮಬಲದ ಭಾವನೆ ಮತ್ತು ತುಟಿಗಳಲ್ಲಿ ಸಣ್ಣದಾದ ಕಿರುನಗೆಯನ್ನು ಕಂಡು ಅವರಿಗೆ ಖುಷಿಯಾಯಿತು.

'ನೀವು ಬಂದಿದ್ದು ಸಂತೋಷ. ದಿನಂಪ್ರತಿ ಪತ್ರಕರ್ತರನ್ನೋ, ಸಮಾಜ ಸೇವಕರನ್ನೋ ನೋಡಿ ಬೇಜಾರಾಗಿತ್ತು' ಎಂದಳು ಮರಿಯಾ. ಅಷ್ಟರಲ್ಲಿಯೇ ಅವಳು ಪಾಠ ಹೇಳಿಕೊಡುತ್ತಿದ್ದ ಹುಡುಗರ ಗುಂಪಿನಿಂದ, ಕೈಯಲ್ಲೊಂದು ಬಿಳಿಪುಟದ